Doc-484
T-P-4

Regd No B G 182 | Jai Gomata ಗೋಮಾತಾಕೀ ಜೈ | Monthly ಮಾಸಪತ್ರಿಕೆ | May 1972 ಮೇ

ಗೋರಕ್ಷಣಕ್ಕೆ ಲೇಖನ ಕೊಡು
ತ್ತಿರುವವರಿಗೆ, ನೆರವು (ಡೊನೇಷನ್)
ನೀಡುತ್ತಿರುವವರಿಗೆ, ಪ್ರಚಾರಮಾಡು
ತ್ತಿರುವವರಿಗೆ ವಂದನೆಗಳು
ಅನೇಕ ಪ್ರತಿಗಳು ಉಚಿತವಾಗಿ
ಹಂಚಲಾಗುತ್ತಿದೆ

ವಾರ್ಷಿಕಚಂದಾ ಅಂಚೆಮೂಲ್ಯ 80ಪೈಸೆ
ವಿನಂತಿ– ಸಕಲರೀತಿಯಲ್ಲೂ ನೆರವುನೀಡಿ

ಶ್ರೀ ಗೋರಕ್ಷಣಿ
GORAKSHANA

Office– 1067 Chamarajapuram, Mysore 4

Please help in every way
This Humanitarian
– Propaganda Paper –
Many Papers Distributed Free
ಗೋರಕ್ಷಣಾ, ಅಹಿಂಸಾ
ಪ್ರಚಾರ ಪತ್ರಿಕೆ
ಜೀವಾಂತ್ಯಂತ ಗೋವಧೆ ಕೂಡಲೆ ನಿಲ್ಲಲಿ

ವರ್ಷ 22 nd Year | ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ | ಬಿಡಿ ಪ್ರತಿ ೫ ಪೈಸೆ

Cow Slaughter should be banned Immediately

ಗೋಮಯದಲ್ಲಿ ಲಕ್ಷ್ಮೀ ನಿವಾಸ

(ಶ್ರೀ ಅನಂತಕೃಷ್ಣ ಜೋಯಿಸ್, ಶಾಸ್ತ್ರಧರ್ಮ ಪ್ರಚಾರ ಸಭಾ, ಹೊಂಗನೂರು)

ಮಹಾಭಾರತ ಅನುಶಾಸನಪರ್ವದ ದಾನ-ಧರ್ಮ ಸರ್ಗದಲ್ಲಿ ಲಕ್ಷ್ಮೀಯ ಪ್ರತಿರೂಪವಾದ ಗೋವು ಪ್ರಸಿದ್ಧವಾಗಿದೆ–

ಶ್ಲೋಕ ॥ ಅವಶ್ಯಂ ಮಾನನಾ ಕಾರ್ಯಾ ತವಾಸ್ಮಾಮಿರ್ಯಾಸ್ವಿನಿ।
ಶಕುನಿಷ್ಟ್ವೈನಸತ್ವಂಮೇ। ಪುಣ್ಯಾಮೇತದ್ವಿನಃಶುಭೆ ॥ (82–24)
ಲಕ್ಷ್ಮೀಭದ್ರಂ ವಃ ಪೂಜಿತಾನ್ಮಿ ಸುಖಸ್ಪರ್ಶಾ (82–25)

ಮೇಲಿನ ಶ್ಲೋಕದಿಂದ ಈರೀತಿ ತಿಳಿಯಬಹುದಾಗಿದೆ; ಏಕೆಂದರೆ ಗೋಮಾತೆಯು ಲಕ್ಷ್ಮೀಯಲ್ಲಿ ಕೃಪೆದೋರಿ ಹೇಳುತ್ತಾಳೆ– 'ನೀನು ನನ್ನ ಮೂತ್ರಗಳಲ್ಲಿಯೂ ಗೋಮಯದಲ್ಲಿಯೂ ವಾಸಮಾಡು : ಆಗ ನಿನ್ನ ಚಂಚಲತೆಯು ಹೋಗುತ್ತದೆ'.

ಅದುದರಿಂದಲೇ ಸನಾತನಧರ್ಮದ ಆಚಾರವಿಚಾರಗಳಲ್ಲಿ ಗೋಮೂತ್ರದ ಹಾಗೂ ಗೋಮಯದ ಬಗ್ಗೆ ವಿಶೇಷತೆ ಇರುತ್ತದೆ. ಅಲ್ಲದೆ ಸಗಣಿಯು ಅದೃಷ್ಟದ ಸಂಕೇತವಿರುತ್ತದೆ ; ಸಗಣಿಯ ದರ್ಶನಮಾತ್ರದಿಂದ ಸೌಭಾಗ್ಯವುಂಟಾಗುತ್ತದೆಂಬ ನಂಬಿಕೆಯಿದೆ. ' ದೃಷ್ಟರೂಪದಿಂದ ಗೋಮಯದಲ್ಲಿ ಲಕ್ಷ್ಮೀಯ ಅಭಿಷಾನಿನೀ ದೇವತೆಯು ವಾಸಮಾಡುತ್ತಿರುತ್ತಾಳೆ.

ಇದರ ತಾತ್ಪರ್ಯ ಹೀಗೆಂದು ಹೇಳಬಹುದಾಗಿರುತ್ತೆ. ನಾವು ಇಂದು ವಾಸ ಮಾಡುವ ಹಿಡಿಯಾಡುತ್ತಿರುವ ಭೂಮಿಯ ಉತ್ಪಾದಕ ಶಕ್ತಿಯು ದಿನೇದಿನೇ ಕ್ಷೀಣಿಸುತ್ತದೆಂಬುದು ಅಮೇರಿಕಾ ವಿಜ್ಞಾನಿಗಳ ಅನುಭವವಾಗಿರುತ್ತೆ. ಭೂಮಿಯ ಉತ್ಪಾದನಾ ಶಕ್ತಿಯು ಹೆಚ್ಚಬೇಕಾದಲ್ಲಿ ಮಣ್ಣಿನೊಹನೆ ಸಗಣಿ ಹಾಗೂ ಗೋಮೂತ್ರವನ್ನು ಬೆರಸಬೇಕು (ವಿಶ್ರಮಾಡಬೇಕು). ರಸಾಯನಿಕ ಗೊಬ್ಬರದಿಂದ ತಾತ್ಕಾಲಿಕ ಹೆಚ್ಚು ಇಳುವರಿ ಪಡೆಯಬಹುದೇ ವಿನಹ ಮಣ್ಣು ತನ್ನ ಉತ್ಪಾದನಾ ಶಕ್ತಿಯನ್ನು ಕಳೆದುಕೊಳ್ಳುವುದಲ್ಲದೆ ಪೈರಿನಪಚ್ಚೆಗಳಿಗೆ ರೋಗಗಳು ಹರಡುತ್ತವೆ ; ಅಲ್ಲದೆ ಹಾಗೆ ಹೆಚ್ಚು ಇಳುವರಿಯನ್ನು ಪಡೆದರೂ ಅದು ಸತ್ವಹೀನವಾಗಿರುತ್ತ ಹೆಂದು ಹೇಳಿದರೆ ತಪ್ಪಾಗಲಾರದು. ಸಗಣಿ ಹಾಗೂ ಗೋಮೂತ್ರದ ಮಿಶ್ರಣದಿಂದ ಭೂಮಿಯ ಉತ್ಪಾದನಾ ಶಕ್ತಿಯು ಹೆಚ್ಚುವುದೆಂದು ಹೇಳಿತಷ್ಟೆ. ಇದರಿಂದ ಅಧಿಕ ಸತ್ವ ಸತ್ವಯುತವಾದ ಉತ್ಪಾದನೆಯು ಲಭ್ಯವಾಗುತ್ತದೆ ; ಇದರಿಂದ ಗೋಮಾತೆಯೂ ಪೂಜಾರ್ಹಳಾಗುತ್ತಾಳಲ್ಲದೆ ಅವಳಿಂದ ನಮಗಾಗುವ ವಿತಿಯಿಲ್ಲದ ಉಪಯೋಗದ ಅರಿವು ಉಂಟಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಅಧಿಕ ಉತ್ಪಾದನೆಯುಂಟಾಗುತ್ತದೆ. ಇದರಿಂದ ಆಸ್ತಿಯ ವೃದ್ಧಿಯಾಗುತ್ತದೆ ; ಹಾಗೂ ಹತ್ತಿಯ ಮತ್ತು ಕೇಷ್ಮೆಯ ವೃದ್ಧಿಯಿಂದ ವಸ್ತ್ರವೃದ್ಧಿಯಾಗುವುದರಿಂದ ಸಾಂಸಾರಿಕ ಅವಶ್ಯಕತೆಗಳೆಲ್ಲವೂ ಪೂರೈಸಲ್ಪಡುವುದರಿಂದ ಲಕ್ಷ್ಮೀಯ ಪ್ರಾಪ್ತಿ ಪ್ರತ್ಯಕ್ಷ ಅನುಭವವಾಗಿರುತ್ತೆ. ಇದರಿಂದ ಗೋಮಾತೆಯನ್ನು ಲಕ್ಷ್ಮೀ ಎಂದು ಹೇಳುವುದು ಅಕ್ಷರಶಃ ಸತ್ಯವಾಗಿರುತ್ತದೆ.

ಸಗಣಿಯ ಉಪಯೋಗವು ಇನ್ನೂ ಇರುವುದರಿಂದ ಇಂಧನದ ಅವಶ್ಯಕತೆಯು ಬೇಕಿರುವುದಿಲ್ಲ. ಹಾತ್ರೆಗಳ ಶುದ್ಧಿಗೋಸ್ಕರ ಸಗಣಿಯ ಭಸ್ಮವನ್ನು ಉಪಯೋಗಿಸುವುದರಿಂದ ಸಾತ್ರೆ ಶೋಧನಾ ಯಂತ್ರದ ಅವಶ್ಯಕತೆ ಇರುವುದಿಲ್ಲ ಈ ಪ್ರಕಾರವಾಗಿ ಲಕ್ಷ್ಮೀಯೇ ನಮ್ಮ ಬಳಿ ಇರುವಳೆಂದೂ, ಸಗಣಿಯಲ್ಲಿ ಲಕ್ಷ್ಮೀಯು ವಾಸ ಮಾಡುತ್ತಾಳೆಂದೂ ಹೇಳಿದುದು ಯಥಾರ್ಥವಾದುದೆಂದೂ ಸಿದ್ಧವಾಯಿತು.

[ಆಧಾರ– ಹಿಂದೀ ಗೋರಕ್ಷಣ] [ಮುಂದುವರಿಯುವುದು]

ಮರೆಯಲಾಗದ ಮೇ

ಮೇ ತಿಂಗಳನ್ನು ಮರೆಯುವುದು ಬಹಳ ತಪ್ಪು. ಮೇ ಮೊದಲ ದಿನವನ್ನು ಮೇ ದಿನವೆಂದು ಕೆಲವರು ಆಚರಿಸುವದಿದೆ : ಕಾರ್ಖಾನೆಯಲ್ಲಿ ರಜಾದಿನ ಅಂದು ಅನೇಕ ಕಡೆಗಳಲ್ಲಿ. ಅಮೇರಿಕಾದಲ್ಲಿ ಕೆಲವು ಕಾರ್ಮಿಕರು ಮಾಲಿಕರ ಕ್ರೂರ ದಬ್ಬಾಳಿಕೆಯ ವಿರುದ್ಧ ಬಂಡೆದ್ದ ದಿನವದು. ಅಮೇರಿಕಾದಲ್ಲಿ ಅದಕ್ಕೆಂದು ಮಹತ್ವವಿಲ್ಲ ; ರಷ್ಯಾ ಅದನ್ನು ಆಚರಿಸುತ್ತದೆ ; ಆಂತೆಯೇ ಇಲ್ಲಿಗೂ ಅದರ ಗಾಳಿ ಬೀಸಿದೆ.

ಮೇ ದಿನಾಂಕ ಹತ್ತು 1857 : ಬ್ರಿಟಿಷ್ ದಬ್ಬಾಳಿಕೆಯ ವಿರುದ್ಧ ಭಾರತೀಯರು ಸಿಡಿದೆದ್ದ ದಿನವದು ; ಕೆಲವರ ಕಾರಣಗಳಿಂದಾಗಿ ನಾವು ಸೋಲನ್ನಪ್ಪಿಕೊಳ್ಳಬೇಕಾದರೂ, ಭಾರತೀಯರನ್ನೆಂದು ಒಂದಾಗಿಸಿದ ಬಿಂದು ಯಾವದೆಂಬುದನ್ನು ಇಂದಿನ ಬಿಕ್ಕಟ್ಟಿನ ದಿನಗಳಲ್ಲಿ ಯೋಚಿಸಬೇಕಾಗಿದೆ. ಎಲ್ಲಾ ಹಿಂದೂಗಳು, ಮುಸ್ಲಿಂರೂ, ಇತರರೂ ಗೋಹತ್ಯೆಗೆದುರಾಗಿ ಭಗವಾಧ್ವಜದಡಿಯಲ್ಲಿ ಒಂದಾದರು. ಪಶುವಧೆಯನ್ನು ಸಹಿಸಿಕೊಳ್ಳಲು ಭಾರತೀಯರು ಸಿದ್ಧರಿರಲಿಲ್ಲ ಬ್ರಿಟಿಷರು ಪಶುವಧೆ ನಡೆಸುವದು ಮಾತ್ರವಲ್ಲ, ಮತಾಂತರಕ್ಕಾಗಿ ಅವರ ಮತಪ್ರಸಾರಕರ ಮೂಲಕ ಹಿಂದೂಗಳಿಗೆ ಗೋಮಾಂಸ ತಿನ್ನಿಸುತ್ತಿದ್ದರೆಂದು ಭಾರತೀಯರು ಅದನ್ನೆದುರಿಸಲು ಒಂದಾದರು ವಿಭಜನೆ, ಪ್ರತ್ಯೇಕತೆಯ ಭಯಂಕರ ಕೂಗು ಕೇಳಿಬರುತ್ತಿರುವಾಗ ಹಸು ಚಿಹ್ನೆ ಹಿಡಿದುಕೊಂಡಿರುವ ಅಡಳಿತ ಪಕ್ಷ ಕಾಸ್ಟ್ರೀಯು ಐಕ್ಯಕ್ಕಾಗಿ ಪಶುವಧೆಯನ್ನು ಪ್ರತಿಬಂಧಿಸಿ, ಪಶುಪವಿತ್ರ ಭಗವಧ್ವಜವನ್ನು ಪುನಃ ರಾಷ್ಟ್ರಧ್ವಜವಾಗಿ ಘೋಷಿಸಿ ಪುಣ್ಯಕಟ್ಟಿಕ್ಕೊಳ್ಳಬಹುದು.

ತಮ್ಮದು ಕಾರ್ಮಿಕರ, ಶ್ರಮಿಕರ ಸರ್ಕಾರವೆಂದು ಭಾರತರತ್ನ ಡಾ॥ ಇಂದಿರಾ ಗಾಂಧಿಯವರು ಹೋದಲ್ಲೆಲ್ಲಾ ಹೇಳುತ್ತಿದ್ದಾರೆ. ಒಳ್ಳೆಯದೂ. ಮೇ ದಿನಗಳಲ್ಲಿ ಬಿಸಿಲಿನ ಬೇಗೆ ಜಾಸ್ತಿ ಇರುತ್ತವೆ. ಸೂರ್ಯತಾಪದಿಂದಾಗಿ ಜನರು ಸತ್ತುಹೋದ ಸುದ್ದಿ ಸಮಾಚಾರ ಪತ್ರಿಕೆಗಳಲ್ಲಿ ಪ್ರಕಟವಾಗುತ್ತವೆ. ಇದನ್ನು ಬಗೆಹರಿಸಲು ಸಾಧ್ಯವಿಲ್ಲವೇನು ? ಹಿಂದಿನ ಕಾಲಗಳಲ್ಲಿ ಅಲ್ಲಲ್ಲಿ ನೀರುಕಟ್ಟೆಗಳನ್ನು ಕಟ್ಟಿ ಪ್ರಯಾಣಿಕರಿಗೆ ಬಾಯಾರಿಸಿಕೊಳ್ಳಲು ನೀರು, ಇನ್ನು ಕೆಲವೆಡೆಗಳಲ್ಲಿ ನೀರಾಮಜ್ಜಿಗೆಯನ್ನು ಕೊಡುತ್ತಿದ್ದರು. ಬಿಸಿಲಿನ ತಾಪದಿಂದ ಕಂಗೆಡದಂತಾಗಲು ಮಜ್ಜಿಗೆ ಅಮೃತ ಸಮಾನವಿದೆ ಆ ಮಜ್ಜಿಗೆಗೆ ಗೋಸಂಪತ್ತು ಆಗತ್ಯ. ಪಶುವಧೆಯನ್ನು ತಡೆಗಟ್ಟಿ ಗೋರಕ್ಷಣೆಗೆ ಹುಲ್ಲುಗಾವಲಿನ ಏರ್ಪಾಡುಮಾಡಿಕೊಟ್ಟಲ್ಲಿ ಅಂಥವರನ್ನು ಬಡವರ ಬಂಧುಗಳೆನ್ನಬಹುದು. ಬಡವರಿಗೆ ಶೈತ್ಯಾಗಾರಾದಿಗಳನ್ನು ಹೊಂದಲು ಸಾಧ್ಯವಿರುವುದಿಲ್ಲ : ಬೆಲೆ ಬಾಳುವ ತಂಪು ಪಾನೀಯಗಳಿಗಾಗಿ ಹಣ ಖರ್ಚು ಮಾಡಲೂ ಸಾಧ್ಯವಿರುವುದಿಲ್ಲ. ಹಾಗಿರುವಾಗ ಅವರ ಪ್ರಾಣ, ಆರೋಗ್ಯವನ್ನುಳಿಸಲಿಕ್ಕಾಗಿ ಸಮಾಜವಾದಿಯೆಂದು ಸಾರಿಕೊಳ್ಳುವ ಸರಕಾರ ಒಡನೆ ಗೋಹತ್ಯವನ್ನು ಪ್ರತಿಬಂಧಿಸಲೇಬೇಕು.

ಪ್ರಚಲಿತ ಸರ್ಕಾರ ಬುದ್ಧಪೂರ್ಣಿಮೆಗೆ ವಿಶೇಷ ಮಹತ್ವವನ್ನು ನೀಡುತ್ತದೆ. ಬುದ್ಧಪೂರ್ಣಿಮೆ ಇದೇ ತಿಂಗಳಲ್ಲಿ ಇರುತ್ತದೆ ಅಷ್ಟೇ ಅಲ್ಲ; ಶಿವಾಜಿಮಹಾರಾಜರು ಶಂಕರಾಚಾರ್ಯರು ಇದೇ ತಿಂಗಳಲ್ಲಿ ಹುಟ್ಟಿರುವರು ; ಪರಶುರಾಮ ಜಯಂತಿ, ನರಸಿಂಹ ಜಯಂತಿಯೂ ಇದೇ ತಿಂಗಳಲ್ಲಿ. ಇವೆಲ್ಲಕ್ಕೂ ಮೆರಗು ಕೊಡುವಂತೆ ನಮ್ಮ ಜನತಾ ಸರಕಾರ ಇದೇ ತಿಂಗಳಲ್ಲಿ ಪಶುವಧೆಯನ್ನು ಪ್ರತಿಬಂಧಿಸಿದಲ್ಲಿ ನಿಜವಾಗಿಯೂ ಇದು ಮರೆಯಲಾಗದ ಮೇ ಆಗುತ್ತದೆ. — ಶಿವಶಂಕರ

ಪರಿಹಾರವೆಲ್ಲಿ ?

ಲೇಖಕರು ; ವಜ್ರಳ್ಳಿ ಗಣಪತಿ ಶರ್ಮಾ

೧

[ಮುಂದುವರಿದುದು]

ಆದರೂ ಮನುಷ್ಯ ಪ್ರಯತ್ನಕ್ಕೆ ಫಲವಿದೆ ಮನಸ್ಸಿದ್ದಲ್ಲಿ ಮಾರ್ಗವಿದೆ ಎಂಬ ಅನುಭವ ವಾಣಿಯ ಆಧಾರದ ಮೇಲೆ, ನವ್ಯ ದಿವ್ಯ ಜೀವನ ಮಾರ್ಗವನ್ನು ತುಳಿಯುವ ಬಯಕೆ ಈಡೇರಲು ಅವಿರತ ಪ್ರಯತ್ನ ನಮ್ಮಿಂದ ಆರಂಭವಾಗಬೇಕಾದ್ದು ಪ್ರಸ್ತುತ ಹಾಗೂ ಅಪರಿಹಾರ್ಯ.

ಅದಕ್ಕಾಗಿ ರವೀಂದ್ರ ಕವೀಂದ್ರರು ಹೇಳಿದಂತೆ–

" where the clear stream of reason has not lost its way into the d eary desert sand of dead habit ..... heaven of freedom .... let my country awake "

(ಎಲ್ಲಿ ಪರಿಶುದ್ಧ ವಿಚಾರಧಾರೆ ಶುಷ್ಕ ಮರುಭೂಮಿಯಲ್ಲಿ ತನ್ನ ದಾರಿಯನ್ನು ಕಳೆದುಕೊಂಡು, ಹಾಗೂ ಮೃತಪಟ್ಟ ದುರಭ್ಯಾಸದಲ್ಲಿ ಪರಿವರ್ತಿತವಾಗಿಲ್ಲವೊ .... ಆ ಸ್ವಾತಂತ್ರ್ಯ ಸ್ವರ್ಗದೊಳಗೆ .... ನನ್ನ ದೇಶ ಜಾಗೃತವಾಗಲಿ)

ಯಾವುದು ಶುದ್ಧ ಸಂಪ್ರದಾಯ, ವಿಚಾರ, ಯಾವುದು ಅಶುದ್ಧ, ಎಂಬುದಕ್ಕೆ ಆವು ನಮಗುಂಟಾಗಿ ತತ್ವನಿಷ್ಠೆ ನಮ್ಮಲ್ಲಿ ಉದಯಿಸಬೇಕಾದರೆ, ಆ ದಿಶೆಯಲ್ಲಿ ದೇಶ ಜಾಗೃತವಾಗಬೇಕಾಗಿದೆ. ಅಂತೆಯೇ ನಮ್ಮೀ ಭರತ ಖಂಡದ ಸಂಸ್ಕೃತಿಯ ಹೆಗ್ಗುರುತಾದ ಗೋಮಾತೆಯ ಅರ್ತನಾದವನ್ನು ನಿಲ್ಲಿಸಲೂ ನಮ್ಮ ದೇಶ ಎಚ್ಚರಾಗಿರಬೇಕಾಗಿವೆ ! ಉಳಿದೆಲ್ಲ ವಿಚಾರಗಳಲ್ಲಿ ದೇಶ ಈಗಾಗಲೇ ಜಾಗ್ರತವಾಗಿದೆ, ಆಗುತ್ತಲಿದೆ : ಆದರೆ ಈ ವಿಚಾರದಲ್ಲಿ ಮಾತ್ರ ವಿನಾಶದ ಗಳಿಗೆ ಬರಲಿರುವುದನ್ನು ತಿಳಿದೇ ತಿಳಿಯದೆಯೋ, ಸ್ವಾರ್ಥದ ಗೋಮಾಂಸದ ರುಚಿಯ ಪರಿಣಾಮವಾಗಿಯೋ ಏನೂ ಅಂತೂ ದಿನದಿನಕ್ಕೆ ಗೋಮಾತೆಯ ಕಗ್ಗೊಲೆ ಹೆಚ್ಚಿಚ್ಚಾಗಿ ನಡೆಯುತ್ತಿದೆ : ಹಾಗೆಯೇ ಪೌಷ್ಠಿಕ ಆಹಾರದ ಕೊರತೆಯೂ ಎದ್ದು ಕಾಣುತ್ತಿದೆ. ಆದರೆ ಇದಕ್ಕೆ ಪರಿಹಾರವನ್ನು ಎಂದು ? ಎಲ್ಲಿ ? ಹೇಗೆ ? ಯಾರಿಂದ ? ಕಾಣೋಣ ? ಅಥವಾ ಲೇಖಕರೊಬ್ಬರು ಹಲವರ ಆಸೆಯನ್ನು ಸ್ಪಷ್ಟಪಡಿಸಿದಂತೆ, ಗೋಮಾತೆಯ ಪವಿತ್ರ ಚಿಹ್ನೆಯನ್ನು ಅಧುನಿಕ ಕೆಲಸಮಾಡುತ್ತಿರುವ ನಮ್ಮ ಈಗಿನ ಸರಕಾರ ಖಂಡಿತವಾಗಿಯೂ ಗೋಮಾತೆಯ ಕ್ಷಾಂಬಿನಿ ಬರಿಸಲು ಕಾರ್ಯಕ್ರಮ ಕೈಗೊಳ್ಳುತ್ತದೆಂದು ಆಸೆ ಹೊತ್ತು ಸಮಾಧಾನ ಪಡೋಣವೇ ?

★

ಭಾರತದಲಿ ಅಹಿಂಸೆ

ಎಂ. ವಿಘ್ನೇಶ್ವರ ಶರ್ಮಾ

ಸ್ವರ್ಣವಲ್ಲೀ ಮಠ

೧

ಪೂರ್ವದಲ್ಲಿ ಭಾರತದಲ್ಲಿ ಎರಡು ರೀತಿಯ ಜನಾಂಗ ಮನೆಮಾಡಿತ್ತು ; ಒಂದು ಆರ್ಯ, ಮತ್ತೊಂದು ದ್ರಾವಿಡ ; ಈ ಎಡದೂ ಜನಾಂಗದ ರೀತಿ, ನೀತಿ, ಜೀವನ ಕ್ರಮ, ತೀರ ಭಿನ್ನವಾಗಿತ್ತು ಆರ್ಯರು ಜೀವನಪಥದಲ್ಲಿ ಒಂದು ಪಥದ ಕಲ್ಪನೆಯನ್ನು ಕಲ್ಪಿಸಿಕೊಂಡಿದ್ದರು : ಒಂದೆಡೆ ನೆಲೆಯಾಗಿರುತ್ತಿದ್ದರು ; ಆಗಿನ ಸುಧಾರಣೆಯ ಪ್ರಥನು ಮೆಟ್ಟಲನ್ನೇರಿದ್ದರು ದ್ರಾವಿಡರೆಂದರೆ ದಾಕ್ಷಿಣಾತ್ಯರು. ಆಗ ದಕ್ಷಿಣದಲ್ಲೆಲ್ಲಾ ಕಾಡೇ ತುಂಬಿತ್ತು ; ಈ ಕಾಡೇ ಪೂರ್ವ ದ್ರಾವಿಡರ ನಾಡಾಗಿತ್ತು : ಇವರು ಒಂದೆಡೆ ಮನೆ ಮಾಡಿ ನಿಲ್ಲುತ್ತಿದ್ದಿಲ್ಲ ; ಎಲ್ಲೆಲ್ಲೋ ಅಲೆಯುತ್ತಿದ್ದರು ; ಬಾಳಿನಲ್ಲಿ ಗುರಿಯಾಗಲೀ, ನೀತಿಯ ಜರಿಯಾಗಲೀ ಇದ್ದಿಲ್ಲ ; ಇವರ ವೃತ್ತಿಯಿಂದ ಆಯಾದಿನದ ಆಹಾರ ಹುಡುಕುವುದು, ಕೈಗೆಸಿಕ್ಕರೆ ಸಾಕು, ಜಿಂಕೆಯಾಗಲೀ ಕಾಡುಕೋಣವಾಗಲೀ ಲೆಕ್ಕಿಸುತ್ತಿರಲಿಲ್ಲ ; ಪ್ರಾಣಿ ಹಿಂಸೆಯೇ ಅವರ ಜೀವನವಾಗಿತ್ತು.

ಆಗಿನ ಕಾಲದ ಕಾಡು ಪ್ರಾಣಿಗಳಲ್ಲಿ ಗೋವೂ ಒಂದಾಗಿತ್ತೋ ಏನೋ ? ಗೋಮಾಂಸದ ರುಚಿಗೆ ಮಾರುಹೋದ ದ್ರಾವಿಡರು ಗೋವು ಎಲ್ಲಿದ್ದರೂ ಹುಡುಕಿ ಕೊಲ್ಲುತ್ತಿದ್ದರು. ಆಗಲೂ ಗೋವ್ಗಳು ಗುಂಪಾಗಿಯೇ ಇರುತ್ತಿದ್ದವು; ಈವೇಳೆಗಾಗಲೇ ಆರ್ಯರು ಗೋಸ್ತುಲದಿಂದ ಬೇಸಾಯಕ್ಕೆಳಿದ್ದರು. ಹೋರಿಗಳಿಂದ ಹೊಲಿಸಿ ಬೆಳೆ ಬೆಳೆಯುವ ಪ್ರಾಯೋಗಿಕ ವೈಜ್ಞಾನಿಕ ಮೆದಳು, ಹತ್ತು ಸಾವಿರ ವರ್ಷಗಳ ಹಿಂದೆಯೇ ನಮ್ಮವರಲ್ಲಿತ್ತು. ಮಾನವನ ಉನ್ನತಿಯು ಯುಗಾರಂಭವಾದದ್ದೂ ಅಂದಿನಿಂದಲೇ. ಅವರು ಹುಲುಸಾಗಿ ಬೆಳೆಬರುವ ತುಹಿನ ತಪ್ಪಲುಗಳನ್ನೇ ಆರಿಸಿನ್ನೇ ಆರಿಸಿಕೊಂಡರು. ಮುಂಗನಿಂದ ಮಾನವನಾಗುವಾಗ ವನಮಾನವನಲ್ಲಿ ಆಪಾರ ಬದಲಾವಣೆಗಳಾದವು. ಆತನು ತನ್ನ ಜೀವನದಲ್ಲಿ ಹಲವಾರು ಸುಸಂಸ್ಕೃತ ಮಾರ್ಪಾಟುಗಳನ್ನು ಮಾಡಿಕೊಂಡ; ಕೌಟುಂಬಿಕ ಬಾಳನ್ನು ಕಂಡುಕೊಂಡ; ಆದು ಆದು ಅವನ ಎರಡನೇ ಮಹಾಹೆಜ್ಜೆಯನ್ನಬಹುದು. [ಸಶೇಷ

ಮಾತರಃ ಸರ್ವಭೂತಾನಾಂಗಾವಃ

(ಬರೆದವರು– ಶ್ರೀ ವೆಂಕಟರಾಯಾಚಾರ್ಯ, ವಿದ್ವಾನ್, ಸುರತ್ಕಲ್)

[ಮುಂದುವರಿದುದು]

ಅನೇಕ ದೇಶಗಳಲ್ಲಿ ಪ್ರತಿಯೊಬ್ಬ ಮನುಷ್ಯನಿಗೆ ಅದೆಷ್ಟು ಹಾಲು ಉತ್ಪಾದಿಸುವುದು, ಅದೆಷ್ಟು ವೆಚ್ಚವಾಗುವುದೆಂದು ಕೆಳಗಿನ ಪಟ್ಟಿಯಿಂದ ತೋರಿಸಲಾಗಿತ್ತದೆ–

ದೇಶ	ಪ್ರತಿಯೊಬ್ಬನಿಗೆ ಹಾಲು ಉತ್ಪಾದನೆ:	ಪ್ರತಿಯೊಬ್ಬನಿಗೆ ಹಾಲಿನ ವೆಚ್ಚ
ಆಸ್ಟ್ರೇಲಿಯಾ	74 ಔನ್ಸ್	63 ಔನ್ಸ್
ಸ್ವೀಡನ್	71 ,,	61 ,,
ನ್ಯೂಜಿಲೆಂಡ್	244	56
ಸ್ವಿಜರ್ಲೆಂಡ್	65	49
ಆಂಗ್ಲಾದೇಶ	14	41
ನಾರ್ವೆ	45	43
ಡೆನ್ಮಾರ್ಕ್	148	41

ಹೀಗೆ ಬೇರೆಬೇರೆ ದೇಶಗಳ ಪಟ್ಟಿ ಇರುತ್ತದೆ. ಭಾರತದಲ್ಲಿ ಪ್ರತಿ ಮನುಷ್ಯನ ಆಹ್ನಿಕವಾಗಿ ಹಾಲು ಉತ್ಪಾದನೆ ಎಂಟು ಔನ್ಸ್ ಮಾತ್ರ, ವೆಚ್ಚ 7 ಔನ್ಸ್ ಮಾತ್ರ ವಿನೆ. ಈ ಮೇಲಿನ ಪಟ್ಟಿಯಂತೆ ಸ್ಪಷ್ಟವಾಗುವದೆಂದರೆ, ಆಂಗ್ಲಾ ದೇಶದ ಹೊರತು ಎಲ್ಲಾ ದೇಶಗಳೂ ತಮ್ಮ ದೇಶದಲ್ಲಿ ಕುಡಿಯುತಕ್ಕ ಹಾಲನ್ನು ತಾವೇ ಉತ್ಪಾದಿಸುತ್ತವೆ ; ಅವರ ಆಹಾರದಲ್ಲಿ ಹಾಲಿನ ಅಂಶ ಹೆಚ್ಚಿರುತ್ತದೆ. ನ್ಯೂಜಿಲೆಂಡ್‌ವಾಸಿಗಳು ಪ್ರತಿ ದಿನವೂ ಹೆಚ್ಚು ಹಾಲನ್ನು ಉತ್ಪಾದಿಸುತ್ತವೆ ; ಫಿನ್ಲೆಂಡು ವಾಸಿಗಳು ಎಲ್ಲರಿಗಿಂತ ಹೆಚ್ಚು ಹಾಲನ್ನು ಸೇವಿಸುತ್ತಾರೆ ; ಅಲ್ಲಿ ಎಲ್ಲಾ ಮನುಷ್ಯರೂ 63 ಔನ್ಸ್ ಹಾಲನ್ನು ಆಹ್ನಿಕವಾಗಿ ಕುಡಿಯುತ್ತಾರೆ ; ಅವರೆಲ್ಲರಲ್ಲೂ ಹಾಲು ಭೋಜನದ ಪ್ರಧಾನಾಂಗವಾಗಿದೆ, ಭಾರತದಲ್ಲಿ ಕೇವಲ 7 ಔನ್ಸ್ ಹಾಲನ್ನು ಸೇವಿಸುವರು.... ..... " (ಈ ಲೇಖನದ ಮುಂದಿನ ಭಾಗ ನಷ್ಟವಾಗಿದೆ)

[ಈ ಅಂಕೆಗಳು ಇದೀಗಣ 20 ವರ್ಷಗಳಲ್ಲಿ ವಿದೇಶಗಳಲ್ಲಿ ಬಲು ಹೆಚ್ಚಾಗಿರುವಂತೆ ಭಾರತದಲ್ಲಿ ತುಸು ಹೆಚ್ಚಿರಬಹುದು ; ಆದರೆ ಆಹಾರದಲ್ಲಿರಬೇಕಾದ ಹಾಲಿನ ಅಂಶವು ಸಾಕಷ್ಟು ಭಾರತದಲ್ಲಿಲ್ಲವೆಂಬುದು ಅಂದೂ–ಇಂದೂ–ಮುಂದೂ ಹೇಳಲಡ್ಡಿಯಿಲ್ಲ ಎಲ್ಲಾ ಪ್ರಾಣಿಗಳಲ್ಲೂ ಗೋವು ಮನುಷ್ಯರ ಬದುಕಿಗೆ ಹೆಚ್ಚು ಸಂಬಂಧಿಸಿರುವುದು, ಗೋವಂಶ ರಕ್ಷಣೆಗೆ ಜನತೆಯಲ್ಲಿ ಉದಾಸೀನವಿರುವುದನ್ನು, ಉಪೇಕ್ಷೆ ಇರುವುದನ್ನು ಹೋಗಲಾಡಿಸಿ ತಕ್ಕ ನಿಯಮ ನಿಬಂಧನೆಗಳನ್ನು ಜಾರಿಯಲ್ಲಿ ತರುವಂತೆ ಸರ್ಕಾರವನ್ನು ಪ್ರಮುಖರು ಒತ್ತಾಯಿಸಬೇಕೂ ಪ್ರಾಣಿಗಳ ಹಾಗೂ ಗೋವಿನ ಮಾಂಸವನ್ನು ವಿಕ್ರಯಿಸುವ ಅಂಗಡಿಗಳು ಇಲ್ಲದ ಊರು ತುಗ್ರಾಮವೆಂಬಷ್ಟು ಮಟ್ಟಿಗೆ ಹಳ್ಳಿಹಳ್ಳಿಗಳ ಕೇಂದ್ರಗಳಲ್ಲಿಯೂ ಈಗೀಗ ಮಾಂಸ ವಿಕ್ರಯಕ್ಕೆ ಅವಕಾಶವಿನೆ. ಮಹಾತ್ಮಾ ಗಾಂಧೀಜಯು ಹೇಳಿದಂತೆ ನಡೆಯುವುದೆಂದು ಘೋಷಿಸುವ ಹಿಂದೂದೇಶದಲ್ಲಿ ಹಲವೆಡೆ ಸೇಂದಿ–ಸಾರಾಯಿಗಳ ಅಂಗಡಿಗಳು ಸರ್ಕಾರದ ಸಮ್ಮತಿಯಿಂದಲೇ ತೆರೆಯಲಾಗಿವೆ. ಅಂತೆ ಹಲವೆಡೆ ಹಲವು ತರದ ಮಾಂಸವಿಕ್ರಯಗಳ ಬಗೆಗೆ ಸರ್ಕಾರಿ ಸಮ್ಮತಿ ದೊರೆಯುತ್ತದೆ. ಕೇವಲ ಧನಾರ್ಜನೆಯೇ ಸರ್ಕಾರಿ ಕಾನೂನುಗಳ ಪ್ರಯೋಗದ ಫಲವಾದರೆ, ಮನುಷ್ಯರಲ್ಲಿ ಈ ಬಗೆಗೆ ಜಾಗೃತಿಯುಂಟಾಗುವ ಬದಲು ಹೆಚ್ಚುಮಟ್ಟಿನ ಅನ್ಯಾಯಗಳಿಗೆಡೆಯಾಗುತ್ತಿದೆ ಎಂಬಲ್ಲಿ ಸಂಶಯವಿಲ್ಲ ! " ಗೋರಕ್ಷಣ ' ದ ಬಗೆಗೆ ಇನ್ನಾದರೂ ತಕ್ಕ ವಿಧಿಗಳನ್ನು ಕೈಗೊಳ್ಳುವಲ್ಲಿ ರಾಜಕೀಯ ಮುಖಂಡರೂ, ಜನಪ್ರಮುಖರೂ ಗಮನಿಸಲಿ !

★

ಇರುವೆಗಳಿಂದ ಶಸ್ತ್ರ ಚಿಕಿತ್ಸೆ

ರಷ್ಯಾದಲ್ಲಿನ ಕೀಟ ವಿಜ್ಞಾನಿ ಮರೀಕೊವೆಸ್ಕಿಯವರು ಸೋವಿಯತ್ ಮುಖ್ಯ ಏಷ್ಯದ ಗಣರಾಜ್ಯಗಳಲ್ಲೊಂದಾದ ಕಿಘೀಜಿಯದಲ್ಲಿ ತೇರೆನ್ಸಯಿ ಅಲ್ಲಾತ್ಯಾ ಬೆಟ್ಟಗಳಲ್ಲಿ ಕೀಟ ಜೀವನದ ಸ್ವಾರಸ್ಯಕರ ದೃಶ್ಯಗಳನ್ನು ಕಂಡಿದ್ದಾರೆ. ಕೆಂಪು ತಲೆಯ ಇರುವೆಗಳಲ್ಲಿ ಒಂದು ರೋಗಿ ಇರುವೆಯ ಚಿಕಿತ್ಸೆಯನ್ನು ಅವರು ನೋಡಿದ್ದಾರೆ. ಇರುವೆಗಳು ತಮ್ಮ ರೋಗಿಯನ್ನು ಜಾಗರೂಕತೆಯಿಂದ ತಮ್ಮ ಗೂಡಿನ ಮುಂದಿನ ಚೌಕಕ್ಕೆ ತಂದವು ರೋಗಿಯ ದೇಶದಿಂದ ಅತ್ಯಂತ ಸೂಕ್ಷ್ಮವಾದ ಚೂರನ್ನು ಅವು ಹೊರಗೆ ತೆಗೆಯತೊಡಗಿದವು. ಎರಡು ಅಥವಾ ಮೂರು " ಶಸ್ತ್ರ ಚಿಕಿತ್ಸೆ ' ಇರುವೆಗಳು ಈ ಕೆಲಸದಲ್ಲಿ ತೊಡಗಿದ್ದವು : ಬೇರೆ ಇರುವೆಗಳು ಅವುಗಳಿಗೆ ಸಹಾಯ ಮಾಡುತ್ತಿದ್ದವು ; ಈ ಶಸ್ತ್ರ ಚಿಕಿತ್ಸೆಯು ಅನೇಕ ಗಂಟೆಗಳ ಕಾಲ ನಡೆಯಿತು.

How to save the Cow ?

(Sri C. P. Kedia - Godarsan)

★

(Continued from April Issue)

The balance of power that was prevalent at the time of slavery still continues in the sese that like older days the minority still rules over the country and so far the communal majority is concerned it is sleepy, unassertive, selfish in its immediate interests, fragmented and hopelessly divided. What is more unfortunate is a section of the majority community have decided to take advantage of th s sleepy nature and to exploit the circumstances in their own personal or class interests with the help of minorities. The socalled secular philosophy is the ideological expression of this class of Hindus.

Uudet the given circumstances, the communal problem takes an unexpected turn. On the one-side, there is a vast majority of sleepy Hindus with some noble non-Hindus on their side. On the other side there are well-organised minorities well supported by the most powerful and vocal section of Hindus. The communal problem, so far as cow slaughter is concerned, takes strange forms where the Hindu is set up aginst the nonHindu, the Hindu has to fight again t the Hindu and the Muslim curses the Muslim. To imagine that it is purely a Hind-Muslim question is to live in a fool's paradise. It is only from the powerful support of the secular Hindus who control all the national organs of power, that the non-Hindus insist on continuation of cow-slaughter as one of their fundamental rights.

The organisers of the movement have thus to steer clear of the communal overtones that the Government of India h a s given to the movement. They have to realise that the main fight is not between the Hindu and non-Hindu but rather between the Hindu and non-Hindu. Hence, their energies, whatever they are, are to be concentrated on fighting not Islam or Christianity but rather secularism of the Government of India plus the opposition. In this noble task, they should not hesitate to take the help and aid of all pious and noble Hindus.

It is wrong to think that an overwhelming mass of public opinion actively wants abolition of cowslaughter. Had that been the case, the present Government would not have been in power. The fact again confronts us, that a majority h a v e ceased to actively feel about the movement, which has been repeatedly defeated phisically, politically andmilitarilly Hence, to claim that an overwhelming mass is actively working for ban on cowslaughter will be to exaggerate a situation that does not exist It is only a de ermined minority of idealist Hindus who are working for the movement and may take it to the road of success.

It is unnecessary to discuss whether there was beef-eating in Vedic times or not or that Mahatma Gandhi propogated cow protection. To dilate over the matter too much is to play in the hands of a Goverment that cares damn either for the Vedas or Maha ma Gandhi. [To be continued

Kannada version of Syt. J. Dalmiaji's Article –
" Were Cows slaughtered at King Ranti Deva's Place ? "

" ರಾಜಾ ರಂತೀದೇವ್‌ರವರ ಸ್ಥಳದಲ್ಲಿ ಗೋಹತ್ಯ ಮಾಡಲ್ಪಡುತ್ತಿತ್ತೆ ? "

(ಮುಂದುವರಿದುದು)

ಆದುದರಿಂದ, ರಾಜಾ ರಂತೀದೇವನ ಕೀರ್ತಿಯು ಹೆಸರಿನ ಜೊತೆಗೆ ಚರ್ಮವತಿ ನದಿಯ ಹೆಸರನ್ನು ಒಟ್ಟುಗೂಡಿಸುವದರಿಂದ, ರಾಜಾ ರಂತೀದೇವನ ಅಡಿಗೆಮನೆಯಲ್ಲಿ ಗೋಹತ್ಯ ನಡೆಯುತ್ತಿದ್ದು ಅವುಗಳ ತೊಗಲು ಅಲ್ಲಿ ಶೇಖರಿಸಲ್ಪಡುತ್ತಿದ್ದು ಆ ತೊಗಲುಗಳಿಂದ ತೊಟ್ಟುತ್ತಿದ್ದ ನೀರು ಚರ್ಮವತಿ ಎಂಬ ಹೆಸರು ಪಡೆದ ನದಿಯಾಯಿತೆಂದು ಸಿದ್ಧಿಪಡಿಸುವದು ಸ್ವಾಧ್ಯವಿಲ್ಲ.

ಈ ಪೂರ್ಣ ಘಟನೆಯನ್ನು ಅಮೂಲಾಗ್ರವಾಗಿ ಜಾಗರೂಕತೆಯಿಂದ ವ್ಯಾಸಂಗ ಮಾಡಿದರೆ, ಗೋಹತ್ಯೆಯ ಯಾವ ಹೊಂದಿಕೆಯೂ ಕಂಡುಬರುವದಿಲ್ಲ; ಆದರೆ ಅವುಗಳನ್ನು ದಾನಾ ಕೊಡುವುದರಲ್ಲಿ ನಿಜವಾಗಿಯೂ ಔಚಿತ್ಯವಿದೆ.

.... ಭಾಗವತ ಮಹಾಪುರಾಣದಲ್ಲಿ ರಂತೀದೇವ ....

ಭಾಗವತ ಮಹಾಪುರಾಣ 9.21 ರಲ್ಲಿ ರಾಜಾ ರಂತೀದೇವನ ಇತಿಹಾಸ ತಿಳಿಸಲಾಗಿದೆ : ಅದರ ಸಾರಾಂಶ ಹೀಗಿದೆ—

ರಾಜಾ ರಂತೀದೇವನು ಬಹಳ ಉದಾರಿಯಾಗಿದ್ದು, ತನ್ನ ಮತ್ತು ತನ್ನ ಸಂಸಾರವನ್ನು ಲಕ್ಷಿಸದೆ, ಪ್ರತಿದಿನ ತನ್ನಲ್ಲಿದ್ದುದನ್ನು ಮತ್ತು ಪಡೆಯುದನ್ನು ಇತರರಿಗೆ ಕೊಡುತ್ತಿದ್ದನು ಒಂದು ಸಾರಿ 48 ದಿನಸಗಳ ಉಪವಾಸಾನಂತರ, ಸ್ವಲ್ಪ ಪಾಯಸ ಮತ್ತು ಕ್ತಡುಬು ಮುಂತಾದ್ದನ್ನು ಪಡೆದನು ; ಮನೆಯವರೆಲ್ಲಾ ಊಟಕ್ಕೆ ಕುಳಿತಾಗ, ಒಬ್ಬ ಬ್ರಾಹ್ಮಣ ಅತಿಥಿಯು ಬಂದನು ; ರಾಜಾ ರಂತೀದೇವನಿಗೆ ಆತನು ದೇವರ ಪ್ರತಿರೂಪದಂತೆ ಕಂಡುಬಂದನು ; ರಾಜನು ಆತನನ್ನು ಗೌರವದಿಂದ ಸತ್ಕರಿಸಿದನು ಬ್ರಾಹ್ಮಣನು ಹೊರಟುಹೋದನಂತರ, ರಾಜಾ ಮತ್ತು ಆತನ ಸಂಸಾರದವರು ಮಿಕ್ಕ ಆಹಾರದೊಡನೆ ಊಟಕ್ಕೆ ಕೂತಾಗ ಒಬ್ಬ ಶೂದ್ರ ಅತಿಥಿ ಆಗಮಿಸಿದನು ; ರಾಜನು ಆತನಿಗೆ ಆಹಾರದ ಒಂದು ಭಾಗ ಕೊಟ್ಟನು. ಆ ಶೂದ್ರ ಅತಿಥಿ ಹೊರಟುಹೋದನದನಂತರ, ಕೆಲವು ನಾಯಿಗಳೊಡನೆ ಮತ್ತೊಬ್ಬ ಅತಿಥಿ ಬಂದು ತನ್ನ ನಾಯಿಗಳಿಗೆ ಆಹಾರ ಕೇಳಿದನು : ರಾಜನು ಅವುಗಳನ್ನು ಜೀವಕ ಸಾಕ್ಷಾತ್ಕಾರಗಳೆಂದು ಗೌರವಿಸಿ, ಮಿಕ್ಕಿದ್ದ ಎಲ್ಲಾ ಆಹಾರವನ್ನೂ ಕೊಟ್ಟುಬಿಟ್ಟನು. ಇನ್ನು ಕೇವಲ ಒಬ್ಬನಿಗಾಗುವಷ್ಟು ನೀರು ಮಾತ್ರ ಮಿಕ್ಕಿದ್ದಿತು. ಆ ನೀರನ್ನೇ ಎಲ್ಲರೂ ಹಂಚಿಕೊಂಡು ಕುಡಿಯಲಿದ್ದ ಸಮಯಕ್ಕೆ, ಒಬ್ಬ ಬಾಯಾರಿದ ಚಂಡಾಲನು ಬಂದು ನೀರಿಗಾಗಿ ಬೇಡಿದನು. ರಾಜನು ಅವನ ಬಗ್ಗೆ ಕನಿಕರಗೊಂಡು, ಎಲ್ಲಾ ನೀರನ್ನೂ ಅವನಿಗೆ ಕೊಟ್ಟು, ಸೃಷ್ಟಿಕರ್ತನನ್ನು ಹೀಗೆ ಪ್ರಾರ್ಥಿಸಿದನು—

ನಕಾಮಯೇಹಂ ಗತಿಮೀಶ್ವರಾತ್ ಪರಾಮಷ್ಟರ್ಧಿಯುಕ್ತಾಮಪುನರ್ಭವಂ ವಾ
ಆರ್ತಿಂ ಪ್ರಪದ್ಯೇಖಿಲ ದೇಹಭಾಜಾಮಂತಸ್ಥಿತೋ ಯೇನ ಭವಂತ್ಯದುಃಖಾಃ ॥
(ಭಾಗವತ 9. 21. 12)

ನಾನು ಭಗವಂತನಿಂದ ಎಂಟರಷ್ಟು ಯೋಗಶಕ್ತಿಯಿಂದ-ಕೂಡಿದ (ಅಣಿಮಾ ಮುಂತಾದುವು) ಉನ್ನತ ಪದವಿಯನ್ನಾಗಲೀ ಅಥವಾ ಮೋಕ್ಷವನ್ನಾಗಲೀ ಬಯಸುವುದಿಲ್ಲ ; ಸಂಕಟದಲ್ಲಿರುವವರ ಹೃದಯದಲ್ಲಿದ್ದು ಆ ಎಲ್ಲ ಆತ್ಮಗಳೂ ಅನುಭವಿಸುವ ಯಾತನೆಗಳನ್ನೂ ಅನುಭವಿಸಿ, ಆ ನನ್ನ ಸಂಕಟಗಳಿಂದ, ಅವರ ಸಂಕಟಗಳು ದೂರವಾಗಲೆಂದು ಆಶಿಸುತ್ತೇನೆ. (ಭಾಗವತ 9:21. 12)

ಸ್ವರ್ಗವನ್ನಾಗಲೀ, ಅಷ್ಟಯೋಗ ಶಕ್ತಿಯಿಂದ ದೊರೆಯುವ ಉನ್ನತ ಪದವಿಯನ್ನಾಗಲೀ, ಮೋಕ್ಷವನ್ನಾಗಲೀ ಬಯಸದ, ಮತ್ತು ಇತರರ ಸಂಕಟ ನಿವಾರಣೆಗೆ ತಾನು ಪ್ರತ್ಯಾನ್ಮಕವಾಗಿ ಸಂಕಟ ಅನುಭವಿಸುವಂತೆ ಪ್ರಾರ್ಥಿಸುವಂಥಾ ಮನುಷ್ಯನು ನಿರುಪಾಧಿಕ ಪ್ರಾಣಿಗಳ ಹತ್ಯೆಯ ಪ್ರಶ್ನೆಯಂತಿರಲಿ, ಯಾವ ಜೀವಿತ ಪ್ರಾಣಿಗಾದರು ಕೆಡಕು ಮಾಡಲು ಯೋಚಿಸಾನು.

ಹಿಂದೆ ತಿಳಿಸಿದಂತೆ, ಮಹಾಭಾರತ, ವನಪರ್ವ 208 ನೇ ಪರಿಚ್ಛೇದದಲ್ಲಿ ಅಹಿಂಸೆ ಮತ್ತು ಅದರ ಎದುರು ಕಕ್ಷಿ ಹಿಂಸೆಯ ವಿಷಯ ವ್ಯಪಹರಿಸಲಾಗಿದೆ : ಮತ್ತು ಅಹಿಂಸೆಯು ಅತಿ ಪದ್ಮಣವೆಂದು ಸ್ಥಾಪಿಸಲಾಗಿದೆ : ಮತ್ತು ಅಲ್ಲಿ ಮತ್ಸ್ಯವತಾರ ಐತಿಹಾಸಿಕ ಉದಾಹರಣೆಗಳು ತಿಳಿಸಲ್ಪಡದಿದ್ದರೂ, ಅಲ್ಲಿ ತಿಳಿಸಿರುವ ತತ್ವಕ್ಕೆ ಬೆಂಬಲಿಸದ ಮತ್ತು ಛಿದಕ್ಕೆ ವಿರುದ್ಧವಾಗಿರುವ ರೀತಿಯು ರಾಜಾ ರಂತಿದೇವನ ಸಂಬಂಧದ ವಿಷಯದಲ್ಲಿ ವೇದಿಸಲಾಗಿದೆ ಎಂಬುವನ್ನು ಗ್ರಹಿಸಲಾಗುವುದಿಲ್ಲ. [ಸಶೇಷ

Turning the Wheel of Happiness

DALMIA CEMENT (BHARAT) LIMITED

Dalmiapuram P. O., Tiruchirapalli Distt.

(Tamil Nadu)

Manufacturers of

'ROCKFORT' BRAND

DALMIA Portland Cement

ALSO

Mine-Owners & Suppliers of

High Grade Iron Ore for Export

H. O: 4 Scindia House, New Delhi - 1.

Help The Gorakshana



— Humanitari n Propoganda Monthly ....

ಮುಖ್ಯ ಮಂತ್ರಿಗಳ ಉದಾರದಾನ

ಅಳ್ವಾರ್— ರಾಜಸ್ಥಾನದ ಮುಖ್ಯ ಮಂತ್ರಿಯವರು ಜೋಧಪುರದಲ್ಲಿನ ತಮ್ಮ ಪಿತ್ರಾರ್ಜಿತ ಮನೆಯನ್ನು ಆರ್ಯಸಮಾಜಕ್ಕೆ ದಾನನೀಡಿದರು – ಮುಖ್ಯಮಂತ್ರಿಗಳ ತಾತ ಫೈಜುಲ್ಲಾಖಾನರು ಜೋಧಪುರದ ದಿವಾನರಾಗಿದ್ದಾಗ ಸ್ವಾಮಿ ದಯಾನಂದರು ಅಲ್ಲಿ ವಾಸವಾಗಿದ್ದರು.

★

ದಿವ್ಯವಾಣಿ

"ಮೂರುಲೋಕಗಳನ್ನು ಗೆದ್ದುಕೊಳ್ಳುವ ಸಾಮರ್ಥ್ಯ ಶೀಲದಲ್ಲಿದೆ ; ಜಗತ್ತಿನಲ್ಲಿ ಶೀಲವಂತನಿಗೆ ಅಸಾಧ್ಯವಾದುದೇನೂ ಇಲ್ಲ. — ಸುಭಾಷಿತ

★

ಪಾಕಿಸ್ತಾನ ಮ್ಯೂಜಿಯಂನಲ್ಲಿ

ಕವಹೆಹಲಿ — ಕರಾಚಿಯಲ್ಲಿನ ಪಾಕಿಸ್ತಾನ ರಾಷ್ಟ್ರೀಯ ಮ್ಯೂಸಿಯಂಗೆ ೮ ಪುರಾತನ ಹಿಂದೂ ಧರ್ಮಗ್ರಂಥಗಳನ್ನು ಸೇರಿಸಲಾಗಿದೆ – ಮ್ಯೂಜಿಯಂನಲ್ಲಿ 33 ಅಪರೂಪ ಕೈಬರಹ ಗ್ರಂಥಗಳನ್ನೂ 34 ಐತಿಹಾಸಿಕ ಕಾಗದಪತ್ರಗಳನ್ನೂ ಶೇಖರಿಸಲಾಗಿದೆ.

★

ಪಾನನಿರೋಧಕ್ಕಾಗಿ ಚಳವಳಿ

ಅಳ್ವಾರ್— ದೇಶದಲ್ಲಿ ಪೂರ್ಣ ಪಾನನಿರೋಧವನ್ನು ಈ ವರ್ಷದ ಆಕ್ಟೋಬರ 2 ಗಾಂಧೀಜೀ ಜನ್ಮದಿನೋತ್ಸವದೊಳಗೆ ಜಾರಿಗೆ ತರದಿದ್ದರೆ, ಚಳವಳಿ ಹೂಡುವುದಾಗಿ ಆರ್ಯಸಮಾಜದ 11 ನೇ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ನಿರ್ಧರಿಸಲಾಯಿತು.

★

ಯಾತ್ರಿಕರ ಪ್ರತಿಭಟನೆ

ಜೋಶಿಮಠ— ಬದ್ರಿನಾಥ್‌ಗೆ ಹೊರಟ ನೂರಾರುಗಟ್ಟಲೆ ಯಾತ್ರಿಕರು ತಮ್ಮ ಪ್ರಯಾಣಕ್ಕೆ ಸರಕಾರ ಸೂಕ್ತ ಏರ್ಪಾಟು ಮಾಡದಿರುವುದನ್ನು ಪ್ರತಿಭಟಿಸಿ ಹೃಷಿಕೇಷ್‌ದಲ್ಲಿನ ಬೀದಿಗಳಲ್ಲಿ ಪ್ರದರ್ಶನಕ್ಕೆ ನಡೆಸಿದರು.

ವುಡ್‌ಲ್ಯಾಂಡ್ಸ್ 19-5-72ರಿಂದ ಆಮೋಘ 3ನೇ ವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ಅಪೂರ್ವ 2ನೇ ವಾರ

.... ಮನಮೋಹಕ ಕನ್ನಡ ಚಿತ್ರ ....

ಭಲೇ ರಾಣಿ

Edited Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore 4